(ಇಂದು ದಿನಾಂಕ 12-11-2021 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದ–**

ನಾನು ಒಂದೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದಾವಾ ಸ್ವತ್ತನ್ನು 2002 ನೇ ಸಾಲಿನಲ್ಲಿ ಚಿದಂಬರ ಭಟ್ಟ ಎಂಬುವವರಿಂದ ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ಹೆಗಡೆ ಗ್ರಾಮದಿಂದ ಕಲಕೋಡ ಗ್ರಾಮಕ್ಕೆ ಹೋಗುವಂತಹ ರಸ್ತೆಯು ಹಾದುಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆಯನ್ನು ಡಾಂಬರೀಕರಣ ಮಾಡಲಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಸುಮಾರು 10 ಪೂಟ್ ಎತ್ತರದಲ್ಲಿ ನನ್ನ ಮನೆ ಇದೆ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ನಾನು ಹೊಸದಾಗಿ ಮನೆಯನ್ನು

ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿ. ನಾನು ಹೊಸದಾಗಿ ಮನೆಯನ್ನು ನಿರ್ಮಾಣ ಮಾಡಲು ಪರವಾನಿಗೆಯನ್ನು ಸಂಬಂಧಪಟ್ಟ ಪಂಚಾಯತಿಯಿಂದ ಪಡೆದುಕೊಂಡಿದ್ದೀನಾ ಎಂದರೆ ಸಾಕ್ಷಿಯು ನಾನು ಇದ್ದ ಮನೆಯನ್ನು ರಿಪೇರಿ ಮಾಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ರಿಪೇರಿ ಕಾರ್ಯವನ್ನು ಮಾಡಲು ಪಂಚಾಯತಿಯಿಂದ ಅನುಮತಿ ಅಥವಾ ಪರವಾನಿಗೆ ಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

ದಾವಾ ಸ್ವತ್ತಿನಲ್ಲಿ ಇರುವಂತಹ ದಾರಿಯು ಪೂರ್ವ -ಪಶ್ಚಿಮವಾಗಿದ್ದು, ನನ್ನ ಸ್ವತ್ತಿನ ಮಧ್ಯಭಾಗದಲ್ಲಿ ಇದೆ. ನನ್ನ ಮನೆ ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಎತ್ತರ ಭಾಗದಲ್ಲಿ ಇರುವುದರಿಂದ ಮಳೆ ಬಿದ್ದಾಗ ಮಳೆಯ ನೀರು ಸಹಜವಾಗಿ ಕೆಳಗೆ ಹರಿದು ಬರುತ್ತದೆ ಎಂದರೆ ಸಾಕ್ಷಿಯು ಕೆಳಗೆ ಗಟಾರ ಇದೆ ಎಂದು ನುಡಿಯುತ್ತಾರೆ. ನಾನು ಹೊಸದಾಗಿ ಮನೆಯನ್ನು ನಿರ್ಮಾಣ ಮಾಡಿರುವ ಜಾಗ ಗದ್ದೆಯ ಜಾಗ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಖರೀದಿ ಮಾಡಿದ ನಂತರ ಮಣ್ಣು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಜಾಗಕ್ಕೆ ಹೊಂದಿಕೊಂಡಂತೆ ವಿದ್ಯುತ್ ಟ್ರಾನ್ಸಫಾರ್ಮರ್ ಇದೆ ಎಂದರೆ ಸರಿ.

ನಿ.ಪಿ.10 ರಲ್ಲಿ ಕಾಣುವ ಮನೆಯ ಬಳಿ ನೀರು ನಿಂತಿರುವುದು ಕಂಡುಬರುತ್ತದೆ ಎಂದರೆ ಸರಿ. ನಿ.ಪಿ.10 ಮತ್ತು 11 ರಲ್ಲಿ ವಿದ್ಯುತ್ ಟ್ರಾನ್ಸಫಾರ್ಮರ್ ಕಂಡಬರುತ್ತದೆ ಎಂದರೆ ಸರಿ. 2016 ನೇ ಸಾಲಿನಲ್ಲಿ ಮಳೆಗಾಲದಲ್ಲಿ ಬಂದ ಮಳೆಯಿಂದ ಟ್ರಾನ್ಸಫಾರ್ಮರ್ ಬಳಿ ನೀರು ನಿಂತು ಅದರಿಂದ ವಿದ್ಯುತ್ ಶಾಕ್ ಹೊಡೆದ ಬಗ್ಗೆ ದಿನಪತ್ರಿಕೆಗಳಲ್ಲಿ ಸುದ್ದಿ ಬಂದಿತ್ತು ಎಂದರೆ ಸರಿ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ